**IN THE COURT OF I ADDL. CIVIL JUDGE & JMFC., KADUR**

**O.S.No.364 / 2014**

**DISPOSAL DATE:18-10-2019**

STATE BY: SENIOR ASST. DIRECTOR OF HORTICULTURE

V/S

ACCUSED : SMT. RATHNAMMA

**ಮಧ್ಯಂತರ ಅರ್ಜಿ ಸಂಖ್ಯೆ:6 ರಿಂದ 8 ರ ಕುರಿತು ಆದೇಶ**

ಪ್ರತಿವಾದಿ ಪರ ವಕೀಲರು ಮಧ್ಯಂತರ ಅರ್ಜಿ ಸಂಖ್ಯೆ:6 ಮತ್ತು 7 ಗಳನ್ನು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 18 ನಿಯಮ 17 ಸಹವಾಚಕ ಕಲಂ 151 ರ ಅಡಿಯಲ್ಲಿ ಸಲ್ಲಿಸಿ, ಪ್ರಕರಣವನ್ನು ಪುನಃ ಪ್ರಾರಂಭಿಸಿ ಡಿಡಬ್ಲ್ಯು1 ರವರನ್ನು ಮುಂದುವರೆದ ಮುಖ್ಯ ವಿಚಾರಣೆ ಮಾಡಲು ಅನುಮತಿ ನೀಡಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

**2.** ಪ್ರತಿವಾದಿ ಪರ ವಕೀಲರು ಮಧ್ಯಂತರ ಅರ್ಜಿ ಸಂಖ್ಯೆ:8 ಅನ್ನು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 8 ನಿಯಮ 1(ಎ) ಸಹವಾಚಕ ಕಲಂ 151 ರ ಅಡಿಯಲ್ಲಿ ಸಲ್ಲಿಸಿ, ಅರ್ಜಿಗೆ ಪೂರಕವಾಗಿ ಲಗತ್ತಿಸಿರುವ ಪ್ರಮಾಣಪತ್ರದಲ್ಲಿನ ಸಂಗತಿಗಳನ್ನು ಪರಿಗಣಿಸಿ ದಾಖಲಾತಿಗಳನ್ನು ಹಾಜರುಪಡಿಸಲು ಉಂಟಾಗಿರುವ ವಿಳಂಬವನ್ನು ಮಾನ್ಯತೆ ಮಾಡಬೇಕೆಂದು ಕೋರಿರುತ್ತಾರೆ.

3. ಸದರಿ ಅರ್ಜಿಗಳಿಗೆ ಪೂರಕವಾಗಿ ಲಗತ್ತಿಸಿರುವ ಪ್ರಮಾಣಪತ್ರವನ್ನು ಪರಿಶೀಲಿಸಿದಾಗ ಪ್ರತಿವಾದಿಯು ಕಳೆದ ವಿಚಾರಣಾ ದಿನಾಂಕದಲ್ಲಿ ತನ್ನ ಸಾಕ್ಷ್ಯಕ್ಕಾಗಿ ನಿಗದಿಪಡಿಸಿದ್ದ ಕಾಲಕ್ಕೆ ನಿಯಂತ್ರಿಸಲಾಗದ ಕಾರಣದಿಂದ ಮತ್ತು ಅನಾನುಕೂಲತೆಯಿಂದ ತನ್ನ ಪರವಾಗಿ ಸಾಕ್ಷ್ಯವನ್ನು ಮಾಡಲು ಸಾಧ್ಯವಾಗಿರುವುದಿಲ್ಲವೆಂದು ಹಾಗಾಗಿ ಪ್ರಸ್ತುತ ಇಂದು ನನ್ನ ಪರವಾಗಿ ಸಾಕ್ಷ್ಯ ಮಾಡಲು ಅನುವು ಮಾಡಿಕೊಡಬೇಕೆಂದು ಕೋರಿರುತ್ತಾರೆ. ಅಂತೆಯೇ ತನ್ನ ದಾಖಲಾತಿಗಳು ಮನೆಯಲ್ಲಿ ಕಳೆದುಹೋಗಿದ್ದು ಸದರಿ ದಾಖಲಾತಿಗಳು ನನಗೆ ಇತ್ತೀಚೆಗೆ ಲಭ್ಯವಾಗಿದ್ದು ಹಾಗಾಗಿ ಪ್ರಸ್ತುತ ಸದರಿ ದಾಖಲಾತಿಗಳನ್ನು ಹಾಜರುಪಡಿಸಿ ನಿಶಾನಿಸಲು ಅನುವು ಮಾಡಿಕೊಡಬೇಕೆಂದು ಕೋರಿರುತ್ತಾರೆ. ಸದರಿ ಅರ್ಜಿಯನ್ನು ಪುರಸ್ಕರಿಸುವುದರಿಂದ ಎದುರುದಾರರಿಗೆ ಯಾವುದೇ ಹಾನಿ ಯುಂಟಾಗುವುದಿಲ್ಲವೆಂದು ಬದಲಾಗಿ ಅರ್ಜಿಯನ್ನು ತಿರಸ್ಕರಿಸಿದಲ್ಲಿ ವಾದಿಗೆ ತುಂಬಲಾರದ ಹಾನಿ ಯುಂಟಾಗುತ್ತದೆಂದು ಹೇಳಿರುತ್ತಾರೆ.

4. ಪ್ರಸ್ತುತ ಈ ಮೇಲ್ಕಂಡ ಅರ್ಜಿಗಳಿಗೆ ವಾದಿ ಪರ ವಕೀಲರು ತಕರಾರನ್ನು ಸಲ್ಲಿಸಿ, ಪ್ರತಿವಾದಿಯು ಸುಳ್ಳು ಅಂಶಗಳನ್ನು ನಮೂದಿಸಿ, ಪ್ರಮಾಣಪತ್ರವನ್ನು ಸಲ್ಲಿಸಿರುತ್ತಾರೆಂದು ಹೇಳಿರುತ್ತಾರೆ. ಅಂತೆಯೇ ಪ್ರತಿವಾದಿಗೆ ಸಾಕಷ್ಟು ಕಾಲಾವಕಾಶ ನೀಡಿದ್ದಾಗ್ಯೂ ಸಹಾ ತನ್ನ ಪರವಾಗಿ ಸಾಕ್ಷ್ಯ ಮಾಡಿಸದೇ ಈಗ ಉದ್ದೇಶಪೂರ್ವಕವಾಗಿ ವಾದ ಮಂಡನೆಗಾಗಿ ನಿಗದಿಪಡಿಸಿದ್ದ ಕಾಲಕ್ಕೆ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆಂದು ಹೇಳಿರುತ್ತಾರೆ. ಅಂತಿಮವಾಗಿ ಪ್ರತಿವಾದಿಯು ಪ್ರಕರಣದ ವಿಲೇವಾರಿಗೆ ವಿಳಂಬವನ್ನು ಉಂಟು ಮಾಡಲು ಈ ಅರ್ಜಿಗಳನ್ನು ಸಲ್ಲಿಸಿರುತ್ತಾರೆ. ಹಾಗಾಗಿ ಪ್ರತಿವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿಗಳನ್ನು ವಜಾಗೊಳಿಸಬೇಕೆಂದು ಕೋರಿರುತ್ತಾರೆ.

5. ವಾದಿಯು ಸಲ್ಲಿಸಿರುವ ವಾದಪತ್ರ, ಪ್ರತಿವಾದ ಪತ್ರ ಹಾಗೂ ಕಡತದಲ್ಲಿನ ದಾಖಲಾತಿಗಳನ್ನು ಕೂಲಂಕುಶವಾಗಿ ಪರಿಶೀಲಿಸಲಾಯಿತು. ವಾದಿಯು ಪ್ರಸ್ತುತ ದಾವೆಯನ್ನು ಪ್ರತಿವಾದಿಯ ವಿರುದ್ಧ ದಾವಾ ಅನುಸೂಚಿತ ಸ್ವತ್ತಿನ ಕುರಿತಾಗಿ ಶಾಶ್ವತ ನಿರ್ಬಂಧಕಾಜ್ಞೆಯ ಪರಿಹಾರವನ್ನು ಕೋರಿ ಸಲ್ಲಿಸಿರುತ್ತಾರೆ. ಪ್ರತಿವಾದಿಯು ಮಧ್ಯಂತರ ಅರ್ಜಿ ಸಂಖ್ಯೆಃ6 ರಿಂದ 8 ಅನ್ನು ಸಲ್ಲಿಸಿ, ಪ್ರಕರಣವನ್ನು ಪುನಃ ಪ್ರಾರಂಭಿಸಿ ಪ್ರತಿವಾದಿ ಪರವಾಗಿ ಸಾಕ್ಷ್ಯ ಮಾಡಿಸಲು ಹಾಗೂ ದಾಖಲಾತಿಗಳನ್ನು ಹಾಜರುಪಡಿಸಲು ಉಂಟಾಗಿರುವ ವಿಳಂಬವನ್ನು ಮಾನ್ಯತೆ ಮಾಡಬೇಕೆಂದು ಕೋರಿರುತ್ತಾರೆ. ಈ ಕುರಿತು ಕಡತದಲ್ಲಿನ ದಾಖಲಾತಿಗಳನ್ನು ಹಾಗೂ ಆದೇಶಪತ್ರವನ್ನು ಪರಿಶೀಲಿಸಿದಾಗ ದಿನಾಂಕ 09-01-2019 ರಂದು ಪ್ರತಿವಾದಿಯು ತನ್ನ ಪರವಾಗಿ ಸಾಕ್ಷ್ಯದ ಪ್ರಮಾಣಪತ್ರವನ್ನು ಸಲ್ಲಿಸಿರುವುದು ಕಂಡು ಬರುತ್ತದೆ. ಅಂತೆಯೇ ಸದರಿ ಪ್ರಮಾಣಪತ್ರದಲ್ಲಿ ದಾಖಲಾತಿಗಳನ್ನು ಹಾಜರುಪಡಿಸಲು ಅನುಮತಿ ಕೋರಿ ಮಧ್ಯಂತರ ಅರ್ಜಿ ಸಂಖ್ಯೆಃ5 ಅನ್ನು ಸಲ್ಲಿಸಿರುವುದು ಕಂಡು ಬರುತ್ತದೆ. ಆದಾಗ್ಯೂ ಸಹಾ ನಂತರದಲ್ಲಿ ಪ್ರತಿವಾದಿ ಮತ್ತು ಪ್ರತಿವಾದಿ ಪರ ವಕೀಲರು ಹಾಜರಾಗದ ಕಾರಣ ಪ್ರತಿವಾದಿ ಪರ ಸಾಕ್ಷ್ಯ ಇಲ್ಲ ಎಂದು ಆದೇಶಿಸಿ ಪ್ರಕರಣವನ್ನು ವಾದಮಂಡನೆಗಾಗಿ ಮುಂದೂಡಲಾಗಿರುತ್ತದೆ. ನಂತರದಲ್ಲಿ ಪ್ರಸ್ತುತ ಮಧ್ಯಂತರ ಅರ್ಜಿಗಳನ್ನು ಸಲ್ಲಿಸಿರುತ್ತಾರೆ. ಸದರಿ ಮಧ್ಯಂತರ ಅರ್ಜಿಗಳೊಂದಿಗೆ ದಾವಾ ಅನುಸೂಚಿತ ಸ್ವತ್ತಿನ ಕುರಿತಾಗಿ ಸಂಬಂಧಪಟ್ಟ ಕಂದಾಯ ದಾಖಲಾತಿಗಳನ್ನು ಹಾಗೂ ಛಾಯಾಚಿತ್ರಗಳನ್ನು ಮತ್ತು ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದ ಆದೇಶ ಹಾಗೂ ಇದೇ ನ್ಯಾಯಾಲಯದ ಅಸಲು ದಾವಾ ಸಂಖ್ಯೆಃ456/2000 ರ ತೀರ್ಪು ಮತ್ತು ಡಿಕ್ರಿಯ ದೃಢೀಕೃತ ನಕಲುಗಳನ್ನು ಹಾಜರುಪಡಿಸಿರುತ್ತಾರೆ. ಸದರಿ ದಾಖಲಾತಿಗಳನ್ನು ಕೂಲಂಕುಶವಾಗಿ ಪರಿಶೀಲಿಸಿದಾಗ ಪ್ರತಿವಾದಿಯು ದಾವಾ ಅನುಸೂಚಿತ ಸ್ವತ್ತಿನ ಕುರಿತಾದ ತನ್ನ ಹಕ್ಕನ್ನು ಸಾಬೀತುಪಡಿಸಲು ಸದರಿ ದಾಖಲಾತಿಗಳನ್ನು ನಿಶಾನಿಸುವ ಅಗತ್ಯತೆ ಇದೆ ಎಂಬುದು ಕಂಡು ಬರುತ್ತದೆ.

6. ಈ ಕುರಿತು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 8 ನಿಯಮ 1(ಎ) ಅನ್ನು ಪರಿಶೀಲಿಸಲಾಗಿ ಯಾವುದೇ ದಾಖಲೆಗಳನ್ನು ಪ್ರತಿವಾದ ಪತ್ರದೊಂದಿಗೆ ಸಲ್ಲಿಸದಿದ್ದಲ್ಲಿ ನಂತರದಲ್ಲಿ

ನ್ಯಾಯಾಲಯದ ಅನುಮತಿಯ ಮೇರೆಗೆ ಸದರಿ ದಾಖಲಾತಿಗಳನ್ನು ಹಾಜರುಪಡಿಸಬಹುದು ಎಂದು ನಮೂದು ಇರುತ್ತದೆ. ಪ್ರತಿವಾದಿಯು ಪ್ರಮಾಣಪತ್ರದಲ್ಲಿ ನಮೂದಿಸಿರುವ ಅಂಶಗಳನ್ನು ಪರಿಶೀಲಿಸಿದಾಗ ಹಾಗೂ ಪ್ರತಿವಾದಿಯರು ಹಾಜರುಪಡಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ ಸದರಿ ದಾಖಲಾತಿಗಳು ಪ್ರಕರಣದ ವಿಲೇವಾರಿಗೆ ಅಗತ್ಯತೆ ಇರುತ್ತದೆ ಎಂದು ಕಂಡು ಬರುತ್ತದೆ.

7. ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಗಣಿಸಿದಾಗ ನ್ಯಾಯ ಮತ್ತು ಸಮಾನತೆಯ ದೃಷ್ಟಿಯಿಂದ ಸದರಿ ಅರ್ಜಿಯೊಂದಿಗೆ ಲಗತ್ತಿಸಿರುವ ದಾಖಲಾತಿಗಳನ್ನು ಪಡೆದುಕೊಂಡು ಪ್ರತಿವಾದಿ ಪರ ಸಾಕ್ಷ್ಯವನ್ನು ಮಾಡಿಸಲು ಅನುಮತಿ ನೀಡುವುದು ಅಗತ್ಯತೆ ಇರುತ್ತದೆ. ಅಲ್ಲದೇ ಪ್ರತಿವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆಃ6 ರಿಂದ 8 ಅನ್ನು ನ್ಯಾಯ ಮತ್ತು ಸಮಾನತೆಯ ದೃಷ್ಟಿಯಿಂದ ಹಾಗೂ ವ್ಯಾಜ್ಯಗಳ ಬಾಹುಳ್ಯತೆಯನ್ನು ತಡೆಯಲು ಡಿಬ್ಲ್ಯು1 ರವರನ್ನು ಮುಂದುವರೆದ ಸಾಕ್ಷ್ಯ ಮಾಡಿಸಲು ಮತ್ತು ದಾಖಲಾತಿ ಹಾಜರುಪಡಿಸಲು ಅನುಮತಿ ನೀಡುವುದು ಅಗತ್ಯತೆ ಇರುವುದು ಕಂಡು ಬರುತ್ತದೆ. ಆದಾಗ್ಯೂ ಸಹಾ ಪ್ರತಿವಾದಿಯು ತನ್ನ ಪರವಾಗಿ ಸಾಕ್ಷ್ಯ ಮಾಡಿಸಲು ಹಾಗೂ ದಾಖಲಾತಿಗಳನ್ನು ಹಾಜರುಪಡಿಸಲು ವಿಳಂಬವನ್ನು ಉಂಟು ಮಾಡಿರುತ್ತಾರೆ. ಹಾಗಾಗಿ ಸದರಿ ವಿಳಂಬದ ಕಾರಣಕ್ಕಾಗಿ ಪ್ರತಿವಾದಿಯರು ವಾದಿಗೆ ರೂ.500/- ಖರ್ಚನ್ನು ಪಾವತಿಸತಕ್ಕದ್ದು ಎಂದು ಆದೇಶಿಸಲಾಗಿದೆ. ಈ ಮೇಲ್ಕಂಡ ವಿಸ್ತೃತ ಚರ್ಚೆಯಿಂದ ಪ್ರತಿವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆಃ6 ರಿಂದ 8 ಗಳನ್ನು ಪುರಸ್ಕರಿಸಲಾಗಿದೆ. ಹಾಗಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಃಆದೇಶಃ**

ಪ್ರತಿವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆಃ6 ರಿಂದ 8 ಅನ್ನು ರೂ.500/- ಖರ್ಚು ಸಹಿತ ಪುರಸ್ಕರಿಸಲಾಗಿದೆ.

ಪ್ರಕರಣವನ್ನು ಪ್ರತಿವಾದಿ ಪರ ಸಾಕ್ಷ್ಯಕ್ಕಾಗಿ ನಿಗದಿಪಡಿಸಿ ದಿನಾಂಕ 23-11-2019 ಕ್ಕೆ ಮುಂದೂಡಲಾಗಿದೆ.

(ಈ ಆದೇಶವನ್ನು ಬೆರಳಚ್ಚುಗಾರರಿಗೆ ನೇರವಾಗಿ ಕಂಪ್ಯೂಟರ್ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ, ಓದಿ ತಿದ್ದಿ, ಪ್ರತಿ ತೆಗೆದು ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕಃ 18 ನೇ ಅಕ್ಟೋಬರ್ 2019 ರಂದು ನಾನು ಉದ್ಘೋಷಿಸಿದ್ದೇನೆ.)

(ಸಹಿ/-)
1 ನೇಃಹೆಃ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ. ಕಡೂರು.

*UR*